# ಧಮ್ಮ ಚಕ್ಕ ಪವತ್ತನ

ಜ್ಞಾನೋದಯದ ನಂತರ ಬುದ್ಧ ತಾನು ಸಾಕ್ಷಾತ್ಕರಿಸಿಕೊಂಡ ಧಮ್ಮವನ್ನು (ಸತ್ಯವನ್ನು) ಮೊದಲು ತನ್ನ ಗುರು ಆಲಾರ ಕಲಾಮನಿಗೆ ಹೇಳಬೇಕು ಎಂದು ಹುಡುಕಿಕೊಂಡು ಹೊರಟ. ಆತ ಕಾಲವಾಗಿದ್ದ. ನಂತರ ಮತ್ತೊಬ್ಬ ಗುರು ಉದ್ದಕ ರಾಮಪುತ್ತನ ಆಶ್ರಮದತ್ತ ಹೊರಟ. ವೃದ್ಧನಾಗಿದ್ದ ಆತನೂ ವಿಧಿವಶನಾಗಿದ್ದ. ಆಗ ಬುದ್ಧನಿಗೆ ತನ್ನ ಹಳೆಯ ಶಿಷ್ಯರ ನೆನಪಾಯಿತು. ಅವರು ಇಶಿಪತನದಲ್ಲಿ ಇರುವುದನ್ನು ತಿಳಿದು ಸಾರಾನಾಥಕ್ಕೆ ಹೊರಟ. ಅಂದು ಆಷಾಢ ಹುಣ್ಣಿಮೆಯ ದಿನ. ಬುದ್ಧ ತನ್ನ ಐವರು ಶಿಷ್ಯರಿಗೆ ಮೊದಲು ಧಮ್ಮ ಪ್ರವಚನ ನೀಡಿದ ದಿನ. ಅದು 'ಧರ್ಮ ಚಕ್ರ ಪ್ರವರ್ತನ ದಿನ' ಎಂದು ಪ್ರಸಿದ್ಧವಾಗಿದೆ. ಅದನ್ನು 'ಗುರು ಪೂರ್ಣಿಮೆ' ಎಂದೂ ಕರೆಯುತ್ತಾರೆ. ಬುದ್ಧ ನಿಜವಾದ ಅರ್ಥದಲ್ಲಿ ಜಗದ್ಗುರು. ಜಗತ್ತಿನಾದ್ಯಂತ ಧರ್ಮದ ಹಂಗಿಲ್ಲದೆ ಆಸಕ್ತ ಜನರು ದುಃಖ ಶಮನಕ್ಕಾಗಿ ಬುದ್ಧಗುರುವಿನ ಆಶ್ರಯ ಪಡೆಯುತ್ತಿದ್ದಾರೆ.

ಮೊದಲಿಗೆ ಬುದ್ಧನ ಆಗಮನ ಶಿಷ್ಯರಿಗೆ ಸಂತೋಷವನ್ನೇನು ತರಲಿಲ್ಲ. ಈತ ವೈರಾಗ್ಯವನ್ನು ತೊರೆದಿರಬಹುದೆಂಬ ಅನುಮಾನ. ಆದರೆ ಬುದ್ಧನ ತೇಜಸ್ಸು ಅವರನ್ನು ಆಕರ್ಷಿಸಿತು.

'ನಾನು ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದೇನೆ. ಅದನ್ನು ನಿಮಗೆ ಹೇಳಲು ಕಾತರನಾಗಿದ್ದೇನೆ. ಅದು ಇದುವರೆವಿಗೆ ಯಾರಿಗೂ ಹೊಳೆಯದಿರುವ ಸತ್ಯ. ನಾನು ಕಂಡುಕೊಂಡಿರುವ ಸತ್ಯಕ್ಕೆ ಮೂರು ಮುಖ್ಯ ಲಕ್ಷಣಗಳಿವೆ. ಅವುಗಳನ್ನು ಅರಿತರೆ ಮಾತ್ರ ನಿಮಗೆ ಸತ್ಯ ದರ್ಶನವಾಗುತ್ತದೆ'.

ಬುದ್ಧನ ಈ ಮಾತುಗಳನ್ನು ಕೇಳಿ ಶಿಷ್ಯರಿಗೆ ಕುತೂಹಲ ಹುಟ್ಟಿತು. ಇದುವರೆಗೆ ಯಾರಿಗೂ ಹೊಳೆಯದಿರುವ ಸತ್ಯ ಏನಿರಬಹುದೆಂದು ಕಾತರದಿಂದ ಕುಳಿತರು.

'ಮೊದಲನೆಯದಾಗಿ ನಾನು ಕಂಡುಕೊಂಡಿರುವ ಧರ್ಮ ಮಧ್ಯಮ ಮಾರ್ಗದಲ್ಲಿದೆ. ಮನುಷ್ಯರು ಎರಡು ಅತಿರೇಕಗಳಲ್ಲಿ ಜೀವಿಸುತ್ತಿದ್ದಾರೆ. ಒಂದು ಇಂದ್ರಿಯ ಭೋಗ ಲಾಲಸೆಯಲ್ಲಿ ತಲ್ಲೀನರಾಗಿರುವುದು. ಇನ್ನೊಂದು ವೈರಾಗ್ಯವನ್ನು ಸ್ವೀಕರಿಸಿ ಸ್ವಮರುಕ, ಸ್ವದೇಹ ದಂಡನೆಯಲ್ಲಿ ತೊಡಗಿ ಹಿಂಸೆಪಡುತ್ತಿರುವುದು. ಅತಿಯಾದ ಇಂದ್ರಿಯ ಲಾಲಸೆ ನೀಚಮಾರ್ಗವಾದರೆ ದೇಹದಂಡನೆಯಂಥ ಕಠೋರ ಮಾರ್ಗ ಪ್ರಯೋಜನವಿಲ್ಲದ್ದು. ಆದ್ದರಿಂದ ನಾನು ಮಧ್ಯಮ ಮಾರ್ಗವನ್ನು ಬೋಧಿಸುತ್ತೇನೆ. ಪ್ರಕೃತಿ ಸಹಜವಾದ ದೈಹಿಕ ಬಯಕೆಗಳನ್ನು ಈಡೇರಿಸಿಕೊಳ್ಳುವುದು ಅಪರಾಧವಲ್ಲ. ಆಧ್ಯಾತ್ಮಿಕ ಸಿದ್ಧಿಗೆ ಹಸಿವಿನಿಂದ, ಸ್ವದಂಡನೆಯಿಂದ ಹಿಂಸೆಪಡುವ ಅಗತ್ಯವಿಲ್ಲ. ಎರಡನೆಯದಾಗಿ ನಾನು ಬೋಧಿಸುವ ಧರ್ಮ ದೇವರು ಮತ್ತು ಆತ್ಮಕ್ಕೆ ಹೊರತಾದುದು. ನಾನು ನನ್ನ ಅನುಭವಕ್ಕೆ, ಪ್ರಮಾಣಕ್ಕೆ ದಕ್ಕಿರುವ ಸತ್ಯವನ್ನು ಮಾತ್ರ ಹೇಳುತ್ತೇನೆ. ಆದ್ದರಿಂದ ಅದು ಪ್ರಕೃತಿ ನಿಯತಿಯಲ್ಲದೆ ಬೇರೇನೂ ಅಲ್ಲ. ಮೂರನೆಯದಾಗಿ ಅದು ಮನುಷ್ಯಕೇಂದ್ರಿತವಾದದ್ದು ಮತ್ತು ಇಹದ ಬದುಕಿಗೆ ಸಂಬಂಧಿಸಿದ್ದು'.

ಈ ಪೀಠಿಕೆಯೊಂದಿಗೆ ಬುದ್ಧ ಮೊದಲನೆಯ ದಿನ ತಾನು ಕಂಡುಕೊಂಡ ನಾಲ್ಕು ಆರ್ಯಸತ್ಯಗಳು ಮತ್ತು ಅಷ್ಟಾಂಗಿಕ ಮಾರ್ಗವನ್ನು ಬೋಧಿಸಲನುವಾಗುತ್ತಾನೆ. ಶಿಷ್ಯರಿಗೆ ಮತ್ತಷ್ಟು ಕುತೂಹಲ. ಆತ್ಮವನ್ನೇ ನಿರಾಕರಿಸುವ, ದೇವರಿಲ್ಲದ ಧರ್ಮ ಹೇಗಿರಬಹುದು ಎಂಬ ಸೋಜಿಗ.

ಮೊದಲನೆಯ ಸತ್ಯ, ಲೋಕದಲ್ಲಿ ದುಃಖವಿದೆ. ಹುಟ್ಟು ದುಃಖ, ಮುಪ್ಪು, ರೋಗ ಮತ್ತು ಮರಣವು ದುಃಖ. ಅಪ್ರಿಯರೊಂದಿಗೆ ಇರುವುದು ದುಃಖ, ಪ್ರಿಯರಿಂದ ಅಗಲುವುದು ದುಃಖ. ಬಯಸಿದ್ದು ಲಭಿಸದಿದ್ದರೆ ದುಃಖ. ಪಂಚಸ್ಕಂದಗಳು ದುಃಖ. ಎರಡನೆಯ ಸತ್ಯ; ದುಃಖಕ್ಕೆ ಕಾರಣವಿದೆ. ಅವು ಕಾಮ ತೃಷ್ಣೆ, ಭವ ತೃಷ್ಣೆ ಮತ್ತು ವಿಭವ ತೃಷ್ಣೆ. ಇಂದ್ರಿಯ ಸುಖವೆ ಕಾಮ ತೃಷ್ಣೆ. ಇಹದ ಬದುಕಿನ ಬಯಕೆಗಳು ಭವ ತೃಷ್ಣೆಗೆ (becoming) ಕಾರಣ. ಬೇಡವಾದದ್ದು ಬರದಿರಲಿ ಎಂಬುದು ವಿಭವ ತೃಷ್ಣೆ. ಮೂರನೆಯ ಸತ್ಯ ದುಃಖ ನಿರೋಧ (cessation). ನಾಲ್ಕನೆಯದು ದುಃಖ ನಿರೋಧ ಮಾರ್ಗ. ಅದೇ ಆರ್ಯ ಅಷ್ಟಾಂಗಿಕ ಮಾರ್ಗ. ಪ್ರಜ್ಞೆ, ಶೀಲ ಮತ್ತು ಸಮಾಧಿಯ ತಳಹದಿಯ ಮೇಲೆ ನಿರ್ಮಾಣವಾಗಿರುವ ಮಾರ್ಗ. ಅವುಗಳು; ಸಮ್ಮಾ ಅಂದರೆ ಸರಿಯಾದ ದೃಷ್ಟಿ, ಸಮ್ಮಾ ಸಂಕಲ್ಪ, ಸಮ್ಮಾ ವಾಚ, ಸಮ್ಮಾ ಕರ್ಮ, ಸಮ್ಮಾ ಜೀವನ ಮಾರ್ಗ, ಸಮ್ಮಾ ಪ್ರಯತ್ನ, ಸಮ್ಮಾ ಮನಸ್ಸು, ಸಮ್ಮಾ ಸಮಾಧಿ.

ಬುದ್ಧ ಜೀವನದ ನಿಗೂಢ ಸತ್ಯಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ, ಜನಸಾಮಾನ್ಯರಿಗೆ ಅರ್ಥವಾಗುವ ರೂಪಕಗಳನ್ನು ಬಳಸಿ ಹೇಳಿದ. ಹಾಗಾಗಿಯೆ ಬುದ್ಧವಚನ (ತ್ರಿಪಿಟಕ) ಬಾಯಿಂದ ಬಾಯಿಗೆ ಜನಪ್ರಿಯವಾಗಿ ಸಾಗರಗಳನ್ನು ದಾಟಿ ದೇಶವಿದೇಶಗಳನ್ನು ತಲುಪಿದೆ.

ಒಮ್ಮೆ ಶೈಲನೆಂಬ ಬ್ರಾಹ್ಮಣನು ಬುದ್ಧನನ್ನು ಕುರಿತು 'ನೀನು ರಾಜಕುಮಾರ, ಒಂದು ರಾಜ್ಯವನ್ನು ಆಳಬೇಕಾದವನು ಹೀಗೆ ಸನ್ಯಾಸಿಯಾಗಿರುವುದು ತರವಲ್ಲ' ಎಂದು ಹೇಳುತ್ತಾನೆ. ಅದಕ್ಕೆ ಬುದ್ಧ 'ನಾನು ಈಗಲೂ ರಾಜನೆ, ಅನುತ್ತರವಾದ (ಶ್ರೇಷ್ಠವಾದ) ಧರ್ಮಕ್ಕೆ ನಾನು ರಾಜ' ಎಂದು ಉತ್ತರಿಸುತ್ತಾನೆ. ಅಷ್ಟಕ್ಕೆ ಸುಮ್ಮನಾಗದ ಶೈಲನು 'ಹಾಗಾದರೆ ನಿನ್ನ ರಾಜ್ಯಕ್ಕೆ ಸೇನಾಧಿಪತಿ ಯಾರು? ಹೇಗೆ ರಾಜ್ಯವಾಳುತ್ತೀಯೆ' ಎಂದು ಪ್ರಶ್ನಿಸುತ್ತಾನೆ. 'ಸಾರಿಪುತ್ತನೆ ನನ್ನ ಸೇನಾಧಿಪತಿ, ಧರ್ಮಚಕ್ರದಿಂದಲೇ ನಾನು ರಾಜ್ಯವನ್ನು ನಡೆಸುತ್ತೇನೆ, ಅದು ಎಂದೂ ಹಿಂದಕ್ಕೆ ಉರುಳುವುದಿಲ್ಲ'. ಮುಂದುವರೆದು ಬುದ್ಧ ಹೇಳುತ್ತಾನೆ; 'ನಾನು ತಿಳಿಯಬೇಕಾದದ್ದನ್ನು ತಿಳಿದಿದ್ದೇನೆ, ಭಾವಿಸಬೇಕಾದದ್ದನ್ನು ಭಾವಿಸಿದ್ದೇನೆ' ಬಿಡಬೇಕಾದದ್ದನ್ನು ಬಿಟ್ಟಿದ್ದೇನೆ. ಆದ್ದರಿಂದ ನಾನು ಬುದ್ಧನಾಗಿದ್ದೇನೆ. ಈ ಮೂರು ಮಾತುಗಳಲ್ಲಿ ಎಂತಹ ತತ್ವ ಅಡಗಿದೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲವೆನಿಸುತ್ತದೆ.

■ ಮೂಚಿ

## ಮಾತೇ ಮುತ್ತು

★ ನೀವು ರೆಕ್ಕೆಗಳೊಂದಿಗೆ ಹುಟ್ಟಿದ್ದೀರಿ. ಜೀವನವಿಡೀ ಏಕೆ ತೆವಳಲು ಬಯಸುತ್ತೀರಿ?
-ರೂಮಿ

★ ಪ್ರತಿಯೊಬ್ಬ ಗಂಡು-ಹೆಣ್ಣಿನಲ್ಲೂ ದೇವರನ್ನು ಕಾಣಿರಿ. ನೀವು ಯಾರಿಗೂ ಸಹಾಯ ಮಾಡಲು ಸಾಧ್ಯವಿಲ್ಲ, ಸೇವೆ ಮಾಡಲು ಮಾತ್ರ ಸಾಧ್ಯ.
-ಸ್ವಾಮಿ ವಿವೇಕಾನಂದ

★ ನೀವು ಜನರ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾ ಕುಳಿತರೆ, ಅವರನ್ನು ಪ್ರೀತಿಸಲು ಸಮಯ ಉಳಿಯುವುದಿಲ್ಲ.
-ಮದರ್ ತೆರೇಸಾ

★ ಬಂದದ್ದೆಲ್ಲ ಬರಲಿ, ಹೋದದ್ದೆಲ್ಲ ಹೋಗಲಿ. ಉಳಿದದ್ದರ ಬಗ್ಗೆ ಗಮನ ಹರಿಸಿ.
-ರಮಣ ಮಹರ್ಷಿ

★ ಇವತ್ತೇ ಮಾಡಲು ಸಾಧ್ಯ ಇರುವುದನ್ನು ನಾಳೆಗೆ ಖಂಡಿತಾ ಮುಂದೂಡಬೇಡಿ.
-ಥಾಮಸ್ ಜಫರ್ಸನ್

★ ಭೌತಿಕ ಜಗತ್ತನ್ನು ಪ್ರೀತಿಸುವ ಪಂಡಿತನ ಪಾಂಡಿತ್ಯವನ್ನು ಅನುಮಾನದಿಂದ ನೋಡಿ.
-ಉಮರ್ ಬಿನ್ ಖತ್ತಾಬ್

★ ಏಕಕಾಲಕ್ಕೆ ಎರಡು ಕೆಲಸಗಳನ್ನು ಮಾಡುವವನು ಎರಡರಲ್ಲೂ ಸೋಲುತ್ತಾನೆ.
-ಜಪಾನಿ ಗಾದೆ

★ ನೀವು ಪ್ರೀತಿಸುವ ಕೆಲಸವನ್ನೇ ಆಯ್ಕೆ ಮಾಡಿಕೊಳ್ಳಿ. ಆಗ ನಿಮಗೆ ಒಂದು ದಿನವೂ ಕೆಲಸ ಮಾಡಬೇಕಾಗಿ ಬರುವುದಿಲ್ಲ.
-ಕನ್‌ಫ್ಯೂಶಿಯಸ್

★ ಯಶಸ್ಸಿಗೆ ಮುಖ್ಯ ಕೀಲಿಕೈ ಆತ್ಮವಿಶ್ವಾಸ. ಆತ್ಮವಿಶ್ವಾಸಕ್ಕೆ ಮುಖ್ಯ ಕೀಲಿಕೈ ಪೂರ್ವಸಿದ್ಧತೆ.
-ಆರ್ಥರ್ ಆ್ಯಷ್

★ ಕತ್ತಲೆಯಿಂದ ಕತ್ತಲನ್ನು ಓಡಿಸಲಾಗುವುದಿಲ್ಲ, ಬೆಳಕಿನಿಂದ ಮಾತ್ರ ಸಾಧ್ಯ. ದ್ವೇಷದಿಂದ ದ್ವೇಷವನ್ನು ಹೋಗಲಾಡಿಸಲು ಆಗದು, ಪ್ರೀತಿಯಿಂದ ಮಾತ್ರ ಸಾಧ್ಯ.
-ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ನನ್ನ ಧರ್ಮ ಬಹಳ ಸರಳ; ದಯೆಯೇ ನನ್ನ ಧರ್ಮ.
-ದಲೈ ಲಾಮಾ

★ ಧೈರ್ಯ ಅಂದರೆ ಭಯ ಇಲ್ಲದಿರುವುದಲ್ಲ, ಭಯದ ಮೇಲೆ ಜಯ ಸಾಧಿಸುವುದು.
-ನೆಲ್ಸನ್ ಮಂಡೇಲ